# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.15/ಪಿಆರ್: 03 :2020-21 ದಿನಾಂಕ: 21.11.2020

## ದಾಸರಹಳ್ಳಿ ವಾರ್ಡ್-15ರ ವಾರ್ಡ್ ಸಭೆಯ ನಡವಳಿ

ದಿ.21.11.2020 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ.ಅಶೋಕ್ ಹಿಂಡ, ವಾರ್ಡ್ ಕಮಿಟಿ ನೋಡೆಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದವರು:**

1. ಶ್ರೀಮತಿ.ಅರ್ಚನ, ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ದಾಸರಹಳ್ಳಿ ವಾರ್ಡ್ ನಂ.15
2. ಶ್ರೀ.ನಾರಾಯಣಸ್ವಾಮಿ, ಸಹಾಯಕ ಕಂದಾಯ ಅಧಿಕಾರಿ, ದಾಸರಹಳ್ಳಿ ಉಪ-ವಿಭಾಗ
3. ಶ್ರಿ..ಪಾರ್ಥ, ಹಿರಿಯ ಆರೋಗ್ಯ ಪರಿವೀಕ್ಷಕರು (ವಾ.ನಂ.15)
4. ಶ್ರೀಮತಿ.ಚೈತ್ರ, ಕಿರಿಯ ಆರೋಗ್ಯ ಪರಿವೀಕ್ಷಕರು (ವಾ.ನಂ.15)
5. ಆರಕ್ಷಕ ನಿರೀಕ್ಷಕರು, ಬಾಗಲಗುಂಟೆ ಪೋಲೀಸ್ ಠಾಣೆ
6. ಶ್ರೀ.ತಮ್ಮಣ್ಣ, ಅಧ್ಯಕ್ಷರು, ವಿನಾಯಕ ಕನ್ನಡ ಸಂಘ, ದಾಸರಹಳ್ಳಿ ವಾರ್ಡ್ ನಂ.15
7. ಶ್ರೀ.ಅಂಬರೀಶ್, ಸದಸ್ಯರು, ವಿನಾಯಕ ಕನ್ನಡ ಸಂಘ, ದಾಸರಹಳ್ಳಿ ವಾರ್ಡ್ ನಂ.15
8. ಶ್ರೀ.ವೆಂಕಟೇಶ್, ಪ್ರಧಾನ ಕಾರ್ಯದರ್ಶಿ, ದಲಿತ ಸೇನೆ, ದಾಸರಹಳ್ಳಿ ವಾರ್ಡ್ ನಂ.15
9. ಶ್ರೀ.ಮುನಿರಾಜು, ದಲಿತ ಸಂಘರ್ಷ ಸಮಿತಿ ಸದಸ್ಯರು, ದಾಸರಹಳ್ಳಿ ವಾರ್ಡ್ ನಂ.15
10. ಶ್ರೀ.ರಾಜು, ಸಾಮಾಜಿಕ ಕಾರ್ಯಕರ್ತರು, ದಾಸರಹಳ್ಳಿ ವಾರ್ಡ್ ನಂ.15
11. ಶ್ರೀ.ಲಕ್ಕಪ್ಪ, ಕಾರ್ಯದರ್ಶಿಗಳು, ಒಕ್ಕಲಿಗ ಸಂಘ, ದಾಸರಹಳ್ಳಿ ವಾರ್ಡ್ ನಂ.15
12. ಶ್ರೀಮತಿ.ಅನುಸೂಯಮ್ಮ, ಉಪಾಧ್ಯಕ್ಷರು ಮಹಿಳಾ ಸಂಘ, ಟಿ.ದಾಸರಹಳ್ಳಿ

ಶ್ರೀ.ಅಶೋಕ್ ಹಿಂಡ, ನೋಡೆಲ್ ಅಧಿಕಾರಿ ಹಾಗೂ ಶ್ರೀಮತಿ.ಅರ್ಚನಾ, ಸದಸ್ಯ ಕಾರ್ಯದರ್ಶಿಗಳು, ವಾರ್ಡ್ ನಂ.15, ದಾಸರಹಳ್ಳಿ ರವರುಗಳು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ, ಪಾಲಿಕೆಯ ವಾರ್ಡ್ ಸದಸ್ಯರ ಅಧಿಕಾರವಧಿ ದಿ.10.09.2020 ರಂದು ಮುಕ್ತಾಯಗೊಂಡಿರುವ ಕಾರಣ ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದಲ್ಲಿ ತಿಳಿಸಿರುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರತೀ ವಾರ್ಡ್‌ಗೆ ನೋಡೆಲ್ ಅಧಿಕಾರಿಗಳನ್ನು ನೇಮಿಸಿ, ಸಾರ್ವಜನಿಕ ಕುಂದುಕೊರತೆ ನಿವಾರಣಾ ಸಂಬಂಧ ಪ್ರತೀ ತಿಂಗಳ ಮೊದಲ ಮತ್ತು ಮೂರನೇ ಶನಿವಾರ ಸಭೆ ಸೇರಿ ವಾರ್ಡ್‌ನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ, ಅಗತ್ಯ ಕ್ರಮವಹಿಸಲು ಸೂಚಿಸಿರುವುದಾಗಿ ತಿಳಿಸಿದರು.

### 1. ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಹಾಗೂ ದೂರುಗಳಿಗೆ ಸಂಬಂಧಪಟ್ಟಂತೆ ತೆಗೆದುಕೊಂಡ ಕ್ರಮಗಳ ಬಗ್ಗೆ.

ದಿ.17.10.2020 ರಂದು ನಡೆದ ವಾರ್ಡ್ ಕಮಿಟಿ ಸಭೆಯಲ್ಲಿ ವಾರ್ಡ್ ಸಭೆಯ ಸದಸ್ಯರಾದ ಶ್ರೀ.ಮುನಿರಾಜು ರವರು ದಾಸರಹಳ್ಳಿ ವಾರ್ಡ್‌ನ ಎಸ್.ರಮೇಶ್ ಮುಖ್ಯರಸ್ತೆ ಮತ್ತು ಅಡ್ಡರಸ್ತೆಯ ಚರಂಡಿಗಳಲ್ಲಿ ಹೂಳು ತುಂಬಿರುವ ಕಾರಣ ನೀರು ಸರಾಗವಾಗಿ ಹರಿಯದೇ ಚರಂಡಿಯಲ್ಲಿ ನಿಂತಿರುವ ಬಗ್ಗೆ ಸಭೆಯಲ್ಲಿ ಪ್ರಸ್ಥಾಪಿಸಿ ತುರ್ತಾಗಿ ಸದರಿ ಬಡಾವಣೆಯ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆಗೆಯುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದ್ದರು, ಅದರಂತೆ ವಾರ್ಡ್ ಅಭಿಯಂತರರು ಸದರಿ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಚರಂಡಿಗಳಲ್ಲಿ ತುಂಬಿದ್ದ ಹೂಳನ್ನು ತೆಗೆದು, ನೀರು ಸರಾಗವಾಗಿ ಹರಿಯುವ ಕಾರ್ಯವನ್ನು ಕೈಗೊಂಡು, ಪೂರ್ಣಗೊಳಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

## 2. ಕೋವಿಡ್-19 ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ.

ವಾರ್ಡ್‌ನ ಆರೋಗ್ಯ ಪರಿವೀಕ್ಷಕರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಚರ್ಚಿಸಿ ಪ್ರತೀ ದಿನ 02 ಮೊಬೈಲ್ ಟೀಂ ನ ಮೂಲಕ ರೋಗ ಪತ್ತೆ ಕಾರ್ಯವನ್ನು ನಡೆಸಲಾಗುತ್ತಿರುತ್ತದೆ. ಅದರಲ್ಲಿ ಒಟ್ಟು ಪಾಸಿಟಿವ್ ಕೇಸ್ 981, ಒಟ್ಟು ಬಿಡುಗಡೆ 952, ಮರಣ ಹೊಂದಿದದವರು 08 ಹಾಗೂ ಒಟ್ಟು Active case ಪ್ರಕರಣಗಳು 29 Home Isolation ಪ್ರಕರಣಗಳು 18 & Hospitalization ಪ್ರಕರಣಗಳು 11 ಇರುತ್ತದೆಂದು ಸಭೆಯಲ್ಲಿ ತಿಳಿಸಿದರು. ಸಾರ್ವಜನಿಕರು ಹೆಚ್ಚಾಗಿ ಆಗಮಿಸುವ ಪ್ರದೇಶಗಳಲ್ಲಿ ತಾತ್ಕಾಲಿಕ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮವಹಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಲಾಯಿತು. ಹಾಗೂ ಪ್ರತೀ ದಿನ ರಸ್ತೆ ಮುಂಗಟ್ಟುಗಳಲ್ಲಿರುವ ಸಾರ್ವಜನಿಕರುಗಳಿಗೆ ಕೋವಿಡ್ ಪರೀಕ್ಷೆ ನಡೆಸಲಾಗುತ್ತಿರುತ್ತದೆ.

ಶಾಲಾ ಕಾಲೇಜುಗಳು ಪ್ರಾರಂಭವಾಗುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಕಡ್ಡಾಯವಾಗಿ ಕೋವಿಡ್-19 ಪರಿಕ್ಷೆಗೆ ಒಳಪಡುವ ಬಗ್ಗೆ ಹಾಗೂ ಸದರಿ ವಿಷಯದ ಬಗ್ಗೆ ಜನಜಾಗೃತಿ ಮೂಡಿಸಲು ತಿಳಿಸಲಾಗುವುದು. ಹಾಗೂ ಹಿರಿಯ ನಾಗರೀಕರು ಹಾಗೂ ಮನೆಯಲ್ಲಿಯೇ ಕೋವಿಡ್-19 ಚಿಕಿತ್ಸೆಗೆ ಒಳಪಟ್ಟವರಿಗೆ ಆರೋಗ್ಯದ ಹಿತದೃಷ್ಟಿಯಿಂದ ನಾಡಿಮಿಡಿತ ಪರೀಕ್ಷೆಯ ಸಾಧನ (Pulse Oximeter), ಆಹಾರ ಸಾಮಾಗ್ರಿಗಳು ಹಾಗೂ ಔಷಧಿಗಳನ್ನು ನೀಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಕಡ್ಡಾಯವಾಗಿ ಮಾಸ್ಕ್ ಧರಿಸುವ ಸಂಬಂಧ ಫೀಲ್ಡ್ ಮಾರ್ಷಲ್‌ಗಳ ಸಮನ್ವಯದೊಂದಿಗೆ ಜನಜಾಗೃತಿ ಮೂಡಿಸಲಾಗುತ್ತಿದೆ ಅದರಂತೆ ಮಾಸ್ಕ್ ಧರಿಸದೇ ಸಾರ್ವಜನಿಕವಾಗಿ ಓಡಾಡುವವರಿಗೆ ಕಡ್ಡಾಯವಾಗಿ ನಿಯಮಾನುಸಾರ ರೂ.250.00 ಗಳನ್ನು ದಂಢ ವಿಧಿಸಿ ಕ್ರಮ ಜರುಗಿಸಲಾಗುತ್ತಿದ್ದು, ಮಾಸ್ಕ್ ಧರಿಸದೇ ಸಾರ್ವಜನಿಕವಾಗಿ ಓಡಾಡುತ್ತಿರುವವರಿಗೆ ಪೋಲೀಸ್ ಸಹಾಯದೊಂದಿಗೆ ಪ್ರತೀ ನಿತ್ಯ ಸುಮಾರು 35 ರಿಂದ 40 ಜನಗಳಿಗೆ ದಂಢವಿಧಿಸಲಾಗುತ್ತಿದೆ ಎಂದು ಸಭೆಯಲ್ಲಿ ಮಾರ್ಷಲ್ ರವರು ವಿವರಿಸಿದರು.

ಪೌರ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಗಾಗಿ ದಾಸರಹಳ್ಳಿ ವ್ಯಾಪ್ತಿಯಲ್ಲಿ ಖಾಲಿ ನಿವೇಶನವನ್ನು ನೀಡಲು ಹಿರಿಯ ಆರೋಗ್ಯ ಪರಿವೀಕ್ಷಕರುಗಳು ಸಭೆಯಲ್ಲಿ ತಿಳಿಸಿದರು.

## 3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.

ಘನತ್ಯಾಜ್ಯ ನಿರ್ವಹಣೆಯ ಸಂಬಂಧ ವಾರ್ಡ್‌ನಲ್ಲಿ 19 ಆಟೋಗಳು, ಒಣ ಕಸ ಸಂಗ್ರಹಣಾ ಆಟೋ-03, ಹಾಗೂ 02 ಕಾಂಪ್ಯಾಕ್ಟರ್ ವಾಹನಗಳು ಘನತ್ಯಾಜ್ಯ ವಿಲೇವಾರಿಗಾಗಿ ನಿಯೋಜಿಸಲಾಗಿರುತ್ತದೆಂದು ವಾರ್ಡ್ ಸಮಿತಿ ಸಭೆಯಲ್ಲಿ ಆರೋಗ್ಯ ಪರಿವೀಕ್ಷಕರು ರವರು ತಿಳಿಸಿದರು. ವಾರ್ಡ್ ಸದಸ್ಯರುಗಳು ಪ್ರತೀ ನಿತ್ಯ ಕಸ ಸಂಗ್ರಹಣೆ ವಾಹನಗಳು ಮನೆಮನೆಗೆ ಸರಿಯಾಗಿ ತೆರಳದೇ ಇರುವ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರವರಿಗೆ ದೂರಿದರು ಹಾಗೂ ಇದರ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು. ಸದರಿ ವಿಷಯದ ಬಗ್ಗೆ ತುರ್ತು ಕ್ರಮವಹಿಸಲು ನೋಡೆಲ್ ಅಧಿಕಾರಿ ರವರು ಆರೋಗ್ಯ ಪರಿವೀಕ್ಷಕರಿಗೆ ಸಭೆಯಲ್ಲಿ ತಿಳಿಸಿದರು.

## 4.ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.

ದಾಸರಹಳ್ಳಿ ವಾರ್ಡ್ ನಂ.15ರಲ್ಲಿ ರಸ್ತೆ ಡಾಂಬರೀಕರಣ ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ ಕ್ಯಾಮೆರಾ ಅಳವಡಿಕೆ, ಬೋರ್‌ವೆಲ್ ಕೊರೆಸುವುದು, ಆರ್.ಓ ಪ್ಲಾಂಟ್ ನಿರ್ಮಾಣ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಶೀಘ್ರದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು ಎಂದು ಸಭೆಯಲ್ಲಿ ಸಹಾಯಕ ಅಭಿಯಂತರರು ತಿಳಿಸಿದರು.

## 5. ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ.

ದಾಸರಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗಳಲ್ಲಿ ಉಂಟಾಗಿರುವ ಗುಂಡಿಗಳನ್ನು ಮುಚ್ಚುವ ಸಂಬಂಧ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ರಸ್ತೆ ಗುಂಡಿಗಳನ್ನು ಮುಚ್ಚುವುದಾಗಿ ಸಭೆಯಲ್ಲಿ ವಾರ್ಡ್ ಅಭಿಯಂತರರು ವಿವರಿಸಿದರು.

6.ಆರಕ್ಷಕ ಠಾಣೆಗೆ ಸಂಬಂಧಿಸಿದ ಬಗ್ಗೆ.

ದಾಸರಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಂಬಂಧ ಸಾರ್ವಜನಿಕವಾಗಿ ಮಾಸ್ಕ್ ಧರಿಸದೇ ಓಡಾಡುತ್ತಿರುವವರಿಗೆ ಬಿಬಿಎಂಪಿ ವತಿಯಿಂದ ನಿಯೋಜಿಸಲಾಗಿರುವ ಮಾರ್ಷಲ್‌ಗಳೊಂದಿಗೆ ಚರ್ಚಿಸಿ, ದಂಡ ವಿಧಿಸುವ ಸಂದರ್ಭದಲ್ಲಿ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ಪೋಲೀಸ್ ಸಿಬ್ಬಂದಿ ಸಭೆಯಲ್ಲಿ ತಿಳಿಸಿದರು.

7. ವಿದ್ಯುತ್ ಸರಬರಾಜು, ಬೆಸ್ಕಾಂಗೆ ಸಂಬಂಧಿಸಿದ ಬಗ್ಗೆ.

ಶ್ರೀ.ರಾಜು, ಸಾಮಾಜಿಕ ಕಾರ್ಯಕರ್ತರು ರವರು ಬೀದಿ ದೀಪಗಳ ನಿರ್ವಹಣೆ ಕಾರ್ಯವನ್ನು ಸರಿಯಾಗಿ ನಡೆಸುತ್ತಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ವಿದ್ಯುತ್ ವಿಭಾಗ, ದಾಸರಹಳ್ಳಿ ಹಾಗೂ ಬೆಸ್ಕಾಂ ಕಛೇರಿ ವತಿಯಿಂದ ಸಂಬಂಧಪಟ್ಟ ಸಿಬ್ಬಂದಿಗಳು ಸಭೆಗೆ ಗೈರು ಹಾಜರಾಗಿರುವ ಕಾರಣ ಇತರೆ ಇಲಾಖೆ ನಿರ್ವಹಣೆ ಬಗ್ಗೆ ಚರ್ಚಿಸಲು ಸಾಧ್ಯವಾಗಿರುವುದಿಲ್ಲ. ಇದರ ಬಗ್ಗೆ ವಾರ್ಡ್ ಸಮಿತಿ ಸದಸ್ಯರುಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸಿದರು.

8. ಬೆಸ್ಕಾಂ, ಬೃಹತ್ ನೀರುಗಾಲುವೆ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಗೆ ಸಂಬಂಧಿಸಿದ ಬಗ್ಗೆ.

ಬೆಸ್ಕಾಂ, ಬೃಹತ್ ನೀರುಗಾಲುವೆ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಛೇರಿ ವತಿಯಿಂದ ಸಂಬಂಧಪಟ್ಟ ಸಿಬ್ಬಂದಿಗಳು ಸಭೆಗೆ ಗೈರು ಹಾಜರಾಗಿರುವ ಕಾರಣ ಇತರೆ ಇಲಾಖೆ ನಿರ್ವಹಣೆ ಬಗ್ಗೆ ಚರ್ಚಿಸಲು ಸಾಧ್ಯವಾಗಿರುವುದಿಲ್ಲ. ಇದರ ಬಗ್ಗೆ ವಾರ್ಡ್ ಸಮಿತಿ ಸದಸ್ಯರುಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಸೂಚಿಸುವಂತೆ ವಾರ್ಡ್ ಕಾರ್ಯದರ್ಶಿಗಳಿಗೆ ತಿಳಿಸಿದರು.

ಅಂತಿಮವಾಗಿ ನೋಡೆಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿಗಳು ಮಾತನಾಡಿ, ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸ್ಪಂದಿಸಿ ಬಗೆಹರಿಸಲು, ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳ ಸಮನ್ವಯತೆ ಇಂದ ಕೆಲಸ ನಿರ್ವಹಿಸಲು ಹಾಗೂ ಮುಂದಿನ ಸಭೆಯಲ್ಲಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ನೋಡೆಲ್ ಅಧಿಕಾರಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸದಸ್ಯ ಕಾರ್ಯದರ್ಶಿ | ನೋಡಲ್ ಅಧಿಕಾರಿ ಹಾಗೂ |
| ಹಾಗೂ ಸಹಾಯಕ ಅಭಿಯಂತರರು | ವಾರ್ಡ್ ಸಮಿತಿ ಅಧ್ಯಕ್ಷರು |
| ವಾರ್ಡ್ ನಂ. 15, ದಾಸರಹಳ್ಳಿ | ಮತ್ತು ಕಾರ್ಯಪಾಲಕ ಅಭಿಯಂತರರು |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

ಅಧಿಕಾರಿಗಳ ಮಾಹಿತಿಗಾಗಿ

1) ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
5) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
7) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಲ್ಲಿಸಿದೆ.
10) ಕಛೇರಿ ಪ್ರತಿ.